**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ. ಸಂಖ್ಯೆಃ 573/2019**

**ಪಿರ್ಯಾದಿದಾರರು** : ಸರ್ಕಾರದ ಪರ
ಆರಕ್ಷಕ ಉಪ ನಿರೀಕ್ಷಕರು,
ಬಿಳಿಕೆರೆ ಪೊಲೀಸ್ ಠಾಣೆ, ಬಿಳಿಕೆರೆ.

**ವಿರುದ್ಧ**

**ಆರೋಪಿತ** :. ಬಸವರಾಜು ಪಿ.ಜೆ.,
ಬಿನ್. ಜವರೇಗೌಡ,
38 ವರ್ಷ, ಅಟೆಂಡರ್,
ವಾಸಃ ಪುರಾ ಗ್ರಾಮ,
ಕೆ.ಆರ್.ಪೇಟೆ ತಾಲ್ಲೂಕು,
ಮಂಡ್ಯ ಜಿಲ್ಲೆ.
ಹಾಲಿ ವಾಸಃ ವಿನಾಯಕ ಬಡಾವಣೆ, ಕೆ.ಆರ್.ನಗರ ಟೌನ್.

# ಆಪಾದನೆ

ದಿಃ 10-04-2014 ರಂದು ಮಧ್ಯಾಹ್ನ 03-00 ಗಂಟೆ ಸಮಯದಲ್ಲಿ ಬಿಳಿಕೆರೆ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಮನುಗನಹಳ್ಳಿ ಚೆಕ್ ಪೋಸ್ಟ್ ನಲ್ಲಿ ವಾಹನಗಳ ತಪಾಸಣೆಗಾಗಿ ಸಾಕ್ಷಿ-1 ರವರನ್ನು ನಿಯೋಜನೆ ಮಾಡಿದ್ದು, ಅದರಂತೆ ಸಾಕ್ಷಿ-1 ರವರು ಸಾಕ್ಷಿ-2 ರಿಂದ ಸಾಕ್ಷಿ-8 ರವರ ಜೊತೆಯಲ್ಲಿ ಮೈಸೂರು ಕಡೆಯಿಂದ ಹುಣಸೂರು ಕಡೆಗೆ ಬರುತ್ತಿದ್ದ ಕೆಎ-09-ಎಫ್-4725 ನಂಬರಿನ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ತಪಾಸಣೆ ಮಾಡಿದಾಗ ನಿಮ್ಮ ಕಿಟ್ ಬ್ಯಾಗಿನಲ್ಲಿ ಬಟ್ಟೆಗಳ ಜೊತೆಯಲ್ಲಿ ಯಾವುದೇ ದಾಖಲೆಗಳಿಲ್ಲದೇ ಲೋಕಸಭಾ ಚುನಾವಣೆಗೆ ಅನುಚಿತ ಪ್ರಭಾವ ಬೀರುವ ಉದ್ದೇಶದಿಂದ ಅಕ್ರಮವಾಗಿ 500 ರೂ. ಮುಖಬೆಲೆಯ 48,79,000/- ರೂ. ನಗದು ಹಣವನ್ನು ಚುನಾವಣೆಗೆ ಸಂಬಂಧಿಸಿದಂತೆ ವಿಧಿಸಮ್ಮತವಲ್ಲದ ರೀತಿಯಲ್ಲಿ ಸಾಗಾಣಿಕೆ ಮಾಡಿರುವುದರಿಂದ ಆರೋಪಿಯಾದ ನಿಮ್ಮ ಮೇಲೆ ಭಾರತೀಯ ದಂಡ ಸಂಹಿತೆ ಕಲಂ 171(ಎಫ್)(ಹೆಚ್),188 ಮತ್ತು ಕಲಂ 123(1)(2) ಆರ್.ಪಿ. ಆ್ಯಕ್ಟ್ ರಡಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಎಸಗಿರುವಿರಿ ಎಂದು ಆರೋಪಿಸಲಾಗಿದೆ.

**ಆರೋಪಿಯ ಹೇಳಿಕೆ**

ಪ್ರಶ್ನೆಃ- 1) ನಿಮಗೆ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉಃ

ಪ್ರಶ್ನೆಃ- 2) ತಪ್ಪೊಪ್ಪಿಕೊಳ್ಳುವಿರೋ, ವಿಚಾರಣೆಯಾಗಬೇಕೋ?
ಉಃ

ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿತರು ಕೊಟ್ಟ ಉತ್ತರವನ್ನು ಹಾಗೆಯೇ ದಾಖಲಿಸಿ ಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ 12-02-2021

(ಸಣ್ಣಹನಮಗೌಡ)
ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ. ಎಫ್.ಸಿ.,ಹುಣಸೂರು.